ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/26/ಸ್ಕಿಲ್ ಡೆವಲಪ್/ಸಿಸಿಟೆಕ್/2017-18 /3354

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:21-03-2018

**-: ಸುತ್ತೋಲೆ :-**

ವಿಷಯ: **CDTP/CCTEK/PMKVY** ಯೋಜನೆಯಡಿ ತರಬೇತಿ ಪಡೆದ ಅಭ್ಯರ್ಥಿಗಳ ಹಾಗೂ ತರಬೇತಿಯಿಂದ ಉದ್ಯೋಗ / ಸ್ವಯಂ ಉದ್ಯೋಗದಲ್ಲಿ ತೊಡಗಿರುವ ಅಭ್ಯರ್ಥಿಗಳ ವಿವರಗಳನ್ನು ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಕೌಉಜೀಇ 159 ಕೈತಿ 2017, ದಿ:24-10-2017.
2. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/26/ಸ್ಕಿಲ್‌ಡೆವಲಪ್/ಸಿಸಿಟೆಕ್/ 2017-18, ದಿ:01-12-2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ **CDTP/CCTEK/PMKVY** ಯೋಜನೆಯಡಿ ದಿನಾಂಕ:01-04-2017 ರಿಂದ ದಿನಾಂಕ:31-03-2018ರವರೆಗೆ ತರಬೇತಿ ಪಡೆದ ಅಭ್ಯರ್ಥಿಗಳ ಹಾಗೂ ತರಬೇತಿಯಿಂದ ಉದ್ಯೋಗ / ಸ್ವಯಂ ಉದ್ಯೋಗದಲ್ಲಿ ತೊಡಗಿರುವ ಅಭ್ಯರ್ಥಿಗಳ ವಿವರಗಳನ್ನು ನೀಡುವಂತೆ ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಇವರು ಸೂಚಿಸಿರುತ್ತಾರೆ.

ತತ್ಸಂಬಂಧ, ತಮ್ಮ ಸಂಸ್ಥೆಗಳಲ್ಲಿ **CDTP/CCTEK/PMKVY** ಯೋಜನೆಯಡಿ ತರಬೇತಿ ಪಡೆದ ಅಭ್ಯರ್ಥಿಗಳ ಹಾಗೂ ತರಬೇತಿಯಿಂದ ಉದ್ಯೋಗ / ಸ್ವಯಂ ಉದ್ಯೋಗದಲ್ಲಿ ತೊಡಗಿರುವ ಅಭ್ಯರ್ಥಿಗಳ ವಿವರಗಳನ್ನು ಈ ಸುತ್ತೋಲೆಯ ಶೀರ್ಷಿಕೆ ಲಿಂಕ್‌ನ **google form**ನಲ್ಲಿ ದಿನಾಂಕ:04-04-2018ರೊಳಗೆ ಕಡ್ಡಾಯವಾಗಿ ಭರ್ತಿ ಮಾಡಲು ಹಾಗೂ ಸದರಿ ಮಾಹಿತಿಗಳ ದೃಢೀಕೃತ ಪ್ರತಿಗಳನ್ನು ನಿರ್ದೇಶನಾಲಯಕ್ಕೆ ಕಡ್ಡಾಯವಾಗಿ ಕಳುಹಿಸಲು ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಡಿಟಿಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ

**ಸೂಚನೆ:-** ಯೋಜನೆಗಳನ್ನು ಅನುಷ್ಠಾನಗೊಳಿಸದೆ ಇರುವಂತಹ ಸಂಸ್ಥೆಯವರು ಕಡ್ಡಾಯವಾಗಿ ಈ ಸುತ್ತೋಲೆಯ ಶೀರ್ಷಿಕೆ ಲಿಂಕ್‌ನ **google form**ನಲ್ಲಿ ಯೋಜನೆಗಳು ಜಾರಿಯಲ್ಲಿರುವುದಿಲ್ಲ / ಯಾವ ಕಾರಣಾಂತರಗಳಿಂದ ಪ್ರಗತಿ ಇಲ್ಲವೆಂಬ ಬಗ್ಗೆ ನಮೂದಿಸಿ ಕಳುಹಿಸುವಂತೆ ಸೂಚಿಸಲಾಗಿದೆ.